ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.94/2020

| | | | |
|---|---|---|---|
| ಹೆಸರು | : | ಮೊಹಮದ್ ಗೌಸ್ | ಪಿ.ಡಬ್ಲ್ಯೂ :4 |
| ತಂದೆ ಹೆಸರು | : | ಲೇಟ್ ಮೊಹಮದ್ ಹಯತ್ | ಸಿ.ಡಬ್ಲ್ಯೂ :8 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 29.01.2024 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು)

ಪಾಟೀಸವಾಲುಃ ಸ ಸ ಅ ರವರಿಂದಃ-

ದಿಃ22.09.2019 ರಂದು ಗುಬ್ಬಿ 206 ರಸ್ತೆ ಪಕ್ಕದಲ್ಲಿ, ಬಾಬು ಜಗಜೀವನರಾವ್ ನಗರದಲ್ಲಿ ಹಿಂದು ಮಹಾಗಣಪತಿ ಪ್ರತಿಷ್ಟಾಪನೆ ಮಾಡಿದ್ದು, ಅದರ ವಿಸರ್ಜನ ಕಾರ್ಯಕ್ರಮ ಇದ್ದು , ಅದೇ ದಿನ ಮಧ್ಯಾಹ್ನ 12.00 ಸಮಯದಲ್ಲಿ ಸ್ಥಳದಲ್ಲಿದ್ದವರು ಪೊಲೀಸರು ಡಿ.ಜೆ. ಹಾಕಿಸಲು ನಮಗೆ ಅನುಮತಿ ನೀಡಿಲಿಲ್ಲ ಎಂಬ ಕಾರಣದಿಂದ ಡಿ.ಜೆ. ಬೇಕೆ ಬೇಕು ಎಂದು ಗಲಾಟೆ ಮಾಡುತ್ತಾ, ಬಸವರಾಜು, ಪಿ.ಬಿ. ಮಂಜುನಾಥ, ನವೀನ, ಶ್ರೀನಿವಾಸ, ರಂಗನಾಥ, ಯೋಗೀಶ, ಮೋಹನ, ಸಂತೋಷ, ಸೋಮಶೇಖರ, ಶಿವರಾಜು, ಮನೋಹರ, ಸಿದ್ದರಾಜು, ಯಶವಂತ, ಗುಬ್ಬಿ

ಟೌನ್ ರವರುಗಳು ಇತರರೊಂದಿಗೆ ಏಕಏಕಿ ಗುಂಪು ಕಟ್ಟಿಕೊಂಡು ಎನ್ ಎಚ್. 206 ರಸ್ತೆಗೆ ಬಂದರು ಎಂದರೆ ಗೊತ್ತಿಲ್ಲ. ಪೋಲಿಸರು ಎಷ್ಟು ಹೇಳಿದರು ಸಹ ಕೇಳದೆ ರಸ್ತೆಯ ಮಧ್ಯ ದಲ್ಲಿ Humps ಇದ್ದು, ರಸ್ತೆಗೆ ಅಡ್ಡಲಾಗಿ ಕುಳಿತುಕೊಂಡರು ಎಂದರೆ ಗೊತ್ತಿಲ್ಲ. ರಾಷ್ಟ್ರೀಯ ಹೆದ್ದಾರಿಯನ್ನು ತಡೆಗಟ್ಟಬಾರದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟು ಮಾಡಬಾರದು, ಎಂದು ಪೊಲೀಸರು ಕೇಳಿಕೊಂಡರು ಸಹ ಗಣೇಶನನ್ನು ಬಿಡಲು ನಮಗೆ ಡಿ.ಜೆ. ಹಾಕಲೇಬೇಕು ಎಂದು ಹಠ ಇಡಿದು ರಾಷ್ಟ್ರೀಯ ಹೆದ್ದಾರಿ 206 ಈ ರಸ್ತೆಯ ಸಂಚಾರಕ್ಕೆ ತೊಂದರೆ ಮಾಡಿದರು ಎಂದರೆ ಗೊತ್ತಿಲ್ಲ. ನಂತರ ಪೊಲೀಸರಿಗೆ ಧಿಕ್ಕಾರ ಕೂಗಿದರು ಎಂದರೆ ಗೊತ್ತಿಲ್ಲ. ನಂತರ ರಸ್ತೆಯಲ್ಲಿ ಆಂಬುಲೆನ್ಸ್ ಸಹ ಸಂಚರಿಸಿದ್ದು, ಆಂಬುಲೆನ್ಸ್ ವಾಹನಗಳಿಗೂ ಸಹ ತೊಂದರೆ ಮಾಡಿದರು ಎಂದರೆ ಗೊತ್ತಿಲ್ಲ. ನಂತರ ಸುಮಾರು ಒಂದುವರೆ ಗಂಟೆಗು ಹೆಚ್ಚು ಕಾಲ ರಾಷ್ಟ್ರೀಯ ಹೆದ್ದಾರಿಯನ್ನು ಸಂಚಾರಕ್ಕೆ ಅಡ್ಡ ಪಡಿಸಿದರು ಎಂದರೆ ಗೊತ್ತಿಲ್ಲ. ಇದರಿಂದ ಪೊಲೀಸ್ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಈ ರೀತಿ ದಿಃ25.09.2019 ರಂದು ನಿಪಿ- 5 ರಂತೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ತೊಂದರೆ ಕೊಟ್ಟವರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಎಂದರೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

(ಉಂಡಿ ಮಂಜುಳ ಶಿವಪ್ಪ)

ಸಿ ಸಿ ನಂ.94/2020

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.